

ಪ್ರತೀತಿ



ಚಿನ್ಮಯ ಕೃಷ್ಣ

ಕನ್ನಡ ಚೆಸ್ ಸಂಸ್ಥೆ ಆಯೋಜಿಸಿದ್ದ ರಾಷ್ಟ್ರಮಟ್ಟದ ಕ್ಲಾಸಿಕಲ್ ಟೂರ್ನಿಯಲ್ಲಿ ಮಹಾರಾಷ್ಟ್ರದ ವಿಹಾನ್ ರವಿ ರಾವ್ ಟೂರ್ನಿಯ ಅಗ್ರ ಶ್ರೇಯಾಂಕಿತ ಕೇರಳದ ಮಾರ್ತಾಂಡನ್ ವಿರುದ್ಧ ಗೆದ್ದು ಸಂಭ್ರಮಿಸಿದ್ದರು. ಇದೇ ಟೂರ್ನಿಯ ನಾಲ್ಕನೇ ದಿನ 11 ವರ್ಷದ ಬಾಲಕ ಕರ್ನಾಟಕದ ಇಶಾನ್ ಭನ್ಸಾಲಿ ಇಂಟರ್‌ನ್ಯಾಷನಲ್ ಮಾಸ್ಟರ್ ಬಾಲಸುಬ್ರಹ್ಮಣ್ಯಂ ರಾಮನಾಥನ್‌ಗೆ ಸೋಲುಣಿಸಿ ಬೆರಗು ಮೂಡಿಸಿದ್ದರು.

ಚೆಸ್ ಬೋರ್ಡ್‌ನ ಸುತ್ತ ನಡೆಯುತ್ತಿರುವ ಇಂಥ ಅಚ್ಚರಿಗಳನ್ನು ಚೆಸ್ ತಜ್ಞರು ಮತ್ತು ಆಟವನ್ನು ಹತ್ತಿರದಿಂದ ನೋಡುವ ಆರ್ಬಿಟರ್‌ಗಳು ಪ್ರಚಂಡ ಸಾಧನೆ ಅಥವಾ ಚೆಸ್ ಕ್ರೀಡೆಯ ಯುಗಾಂತರವೆಂದೇ ಬಣ್ಣಿಸುತ್ತಾರೆ. ಕರ್ನಾಟಕ ಮತ್ತು ಕೇರಳದಲ್ಲಿ ಬಾಲ ಚೆಸ್‌ಪಟುಗಳ ದೊಡ್ಡ ಪಡೆಯೇ ಸಿದ್ಧವಾಗಿದೆ. ತಮಿಳುನಾಡಿನ ಚೆಸ್ ಪಾರಮ್ಯಕ್ಕೆ ಅವರು ಸವಾಲೆಸೆಯುತ್ತಿದ್ದಾರೆ.

ಪ್ರತೀತಿ ಬೊರ್ದೊಲೊಯ್, ವಿಹಾನ್ ಶೆಟ್ಟಿ, ಇವಾನ್ ರಾಫೆಲ್ ಅರ್ಹಾನ, ಅಯಾನ್ ಪೂತನೆ, ಶ್ರೇಯಾಂಶ್ ದಾಸ್, ಸಕ್ಷಮ್ ಪಾಂಡೆ, ಸಾನ್ವಿಕಾ, ಸನ್ವಿತಾ, ಸಾನ್ವಿ ಸಂತೋಷ್, ವಿಹಾನ್ ವರ್ಧನ್, ಹರ್ಷಿತ್ ರಾಮ್, ಶ್ರೇಯಾ ರಾಜೇಶ್, ಯುವನೇಶ್, ಅಹಾನ್ ಪಣಿಕ್ಕರ್, ಆದ್ಯಾ ಪ್ರಭು, ಆಶಿಶ್ ಶೇನ್ ಮೆಂಡಿಸ್, ಧನುಷ್ ಮಹಾರಂತ್, ಸಂಜಿತ್ ಭಟ್, ಆರ್ಥರ್ ಅರುಣ್ ಅಲೆಕ್ಸ್, ಆಯು ಅತೀಂದ್ರಿಯ ಶೆಟ್ಟಿ, ಕಿಯಾಂಶ್ ಗೌಡ, ಕೇರಳದ ಮಾಧವ ಟಿ, ಆ್ಯರನ್ ಮೃದುಲಾ ಸಂದೀಪ್, ವೈಷ್ಣವ್ ಸುಜಿತ್, ಘನಶ್ಯಾಮ, ದೇವಾದರ್ಶ್ ಶ್ರೀರಾಜ್ ಮುಂತಾಗಿ ಪದೇ ಪದೇ ಕೇಳಿಬರುತ್ತಿರುವ ಹೆಸರುಗಳ ದೊಡ್ಡ ಪಟ್ಟಿಯೇ ಇದೆ.

ಪ್ರತೀತಿ ಅಂತರರಾಷ್ಟ್ರೀಯ ಯುವ ಚೆಸ್‌ನಲ್ಲಿ ಗಮನಸೆಳೆದಿದ್ದಾರೆ. ಜಾರ್ಜಿಯಾದಲ್ಲಿ ಮಾಡಿದ ಸಾಧನೆಯ ಜೊತೆಯಲ್ಲಿ ಕಜಕಸ್ತಾನದಲ್ಲಿ ನಡೆದ ಏಷ್ಯನ್ ಯೂತ್ ರ್‍ಯಾಪಿಡ್ ಚೆಸ್ ಚಾಂಪಿಯನ್‌ಶಿಪ್‌ನ ಚಿನ್ನವೂ ಅವರ ಪಾಲಾಗಿತ್ತು. 2022ರಲ್ಲಿ 9 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನ ಪ್ರಶಸ್ತಿಯೂ ಅವರಿಗೆ ಒಲಿದಿತ್ತು. ಮುಂದಿನ ವರ್ಷ 11 ವರ್ಷದೊಳಗಿನವರ ಚಾಂಪಿಯನ್ ಪಟ್ಟವೂ ಅವರ ಮುಡಿಗೇರಿತ್ತು. ಸ್ಟ್ಯಾಂಡರ್ಡ್ (2066) ರ್‍ಯಾಪಿಡ್ (2001) ವಿಭಾಗಗಳೆರಡಲ್ಲೂ 2 ಸಾವಿರಕ್ಕೂ ಹೆಚ್ಚಿನ ರೇಟಿಂಗ್ ಅವರದು.




ಮಂಗಳೂರಿನಲ್ಲಿ ನಡೆದ ಟೂರ್ನಿಯೊಂದರಲ್ಲಿ ಭಾಗವಹಿಸಿದ್ದ ಮಕ್ಕಳು ಚಿತ್ರ: ಫಕ್ರುದ್ದೀನ್ ಎಚ್.

### ಅಪ್ಪ, ಅಣ್ಣನಿಂದ ಕಲಿತ ಪಾಠ

ನನ್ನ ಮನೆಯವರಿಗೆ ಚೆಸ್ ಇಷ್ಟ. ದೊಡ್ಡ ಮಗ ಮಹಾದೇವನ್ ಟೂರ್ನಿಗಳಿಗೆ ಹೋಗುವಾಗ ತಮ್ಮನನ್ನೂ ಕರೆದುಕೊಂಡು ಹೋಗುತ್ತಿದ್ದ. ಅಪ್ಪ ಮತ್ತು ಅಣ್ಣನ ಜೊತೆ ಕಲಿತು, ಟೂರ್ನಿಯಲ್ಲಿ ಲಭಿಸಿದ ಅನುಭವದಿಂದ ಬೆಳೆದ. 'ಇದು ಕಿಂಗ್, ಇದು ಕ್ವೀನ್' ಎಂದಷ್ಟೇ ಹೇಳುತ್ತಿದ್ದ ಆತ ನಂತರ ಬೆಳೆದ. ಆತನ ಬೆಳವಣಿಗೆ ಖುಷಿ ತಂದಿದೆ.

–ರಶ್ಮಿ ಸಾವನ್, ದೇವನಾರಾಯಣನ ಅಮ್ಮ

### ಎಲ್ಲವೂ ತ್ಯಾಗದ ಫಲ

ಕಿರಿಯ ವಯಸ್ಸಿನ ಚೆಸ್‌ಪಟುಗಳ ಬೆಳವಣಿಗೆ ಖುಷಿ ನೀಡುತ್ತಿದೆ. ಚೆಸ್‌ನಲ್ಲಿ ಭಾರಿ ಬದಲಾವಣೆಗಳು ಆಗುತ್ತಿವೆ. ಇದಕ್ಕೆಲ್ಲ ಆಟಗಾರರ ಮತ್ತು ಅವರ ಪಾಲಕರ ಪರಿಶ್ರಮವೇ ಕಾರಣ. ಅವರ ತ್ಯಾಗಕ್ಕೆ ತಕ್ಕ ಪ್ರತಿಫಲ ಸಿಗುತ್ತಿದೆ. ಚೆಸ್ ಬಗ್ಗೆ ಜನರಲ್ಲಿ ದಿನೇ ದಿನೇ ಆಸಕ್ತಿ ಹೆಚ್ಚುತ್ತಿದೆ. ಅದು ಅತ್ಯಂತ ಶ್ಲಾಘನೀಯ.

–ವಸಂತ ಬಿ.ಎಚ್, ಆರ್ಬಿಟರ್

1806 ರೇಟಿಂಗ್ ಹೊಂದಿರುವ ಮಂಗಳೂರಿನ ವಿಹಾನ್ ಶೆಟ್ಟಿ ಒಟ್ಟು 417 ಪಂದ್ಯಗಳನ್ನು ಆಡಿರುವ ಅನುಭವಿ. ಕಳೆದ ವರ್ಷ ನಡೆದ ಆರ್‌ಸಿಸಿ ಅಂತರರಾಷ್ಟ್ರೀಯ ಟೂರ್ನಿಯ ಕ್ಲಾಸಿಕಲ್ ವಿಭಾಗದಲ್ಲಿ ಅಮೆರಿಕದ ಶ್ರೀಕಾಂತ್ ಅವ್ಯಕ್ತ್ ಎದುರು ಡ್ರಾ ಮಾಡಿಕೊಂಡಿದ್ದರು. ವರ್ಷಾಂತ್ಯದಲ್ಲಿ 100ರಷ್ಟು ರೇಟಿಂಗ್ ಪಾಯಿಂಟ್ ಹೆಚ್ಚಿಸಿಕೊಂಡು ಗಮನ ಸೆಳೆದಿದ್ದಾರೆ.

364 ಪಂದ್ಯಗಳನ್ನು ಆಡಿರುವ ಕೇರಳದ 10 ವರ್ಷ ಪ್ರಾಯದ ಮಾಧವ ಟಿ., ಕಳೆದ ವರ್ಷ ಆಗಸ್ಟ್‌ನಲ್ಲಿ ರೇಟಿಂಗ್ ಪಾಯಿಂಟ್‌ಗಳನ್ನು 1640ರಿಂದ 1674ಕ್ಕೆ ಏರಿಸಿಕೊಂಡಿದ್ದರು. ವರ್ಷಾಂತ್ಯದಲ್ಲಿ ಸಣ್ಣ ಕುಸಿತ ಕಂಡರೂ ಕೇರಳ ರಾಜ್ಯ 11 ವರ್ಷದೊಳಗಿನವರ ವಿಭಾಗದ ಚಾಂಪಿಯನ್ ಆಗಿ ಸಂಭ್ರಮಿಸಿದ್ದರು. ಆ್ಯರನ್ ಮೃದುಲಾ ಸಂದೀಪ್ ಕಳೆದ ವರ್ಷ ಹೆಚ್ಚು ಪಂದ್ಯಗಳನ್ನು ಆಡಿರಲಿಲ್ಲ. ಆರಂಭದಲ್ಲಿ 1682 ರೇಟಿಂಗ್ ಇದ್ದ ಅವರು ನಂತರ ಕುಸಿತ ಕಂಡಿದ್ದಾರೆ. ಆದರೆ ಸಾವಿರಕ್ಕಿಂತ ಕೆಳಗಿಳಿಯಲು ಬಿಡಲಿಲ್ಲ.

12 ವರ್ಷದ ಇವಾನ್ ರಾಫೆಲ್ ಅರ್ಹಾನ ಒಟ್ಟು 231 ಪಂದ್ಯಗಳನ್ನು ಆಡಿದ್ದು, ವರ್ಷಾಂತ್ಯದಲ್ಲಿ 100 ಪಾಯಿಂಟ್ ಹೆಚ್ಚಿಸಿಕೊಂಡು 1526ಕ್ಕೆ ತಲುಪಿಸಿದ್ದಾರೆ. 9ರ ಹರೆಯದ ಸನ್ವಿತಾ ಶೆಟ್ಟಿ ಕಿರು ವಯಸ್ಸಿನಲ್ಲೇ 326 ಪಂದ್ಯಗಳನ್ನು ಆಡಿ 1471 ಪಾಯಿಂಟ್ ಗಳಿಸಿದ್ದಾರೆ. ರ್‍ಯಾಪಿಡ್ ಮತ್ತು ಬ್ಲಿಡ್ಜ್‌ನಲ್ಲಿ ಅವರ ರೇಟಿಂಗ್ 1500 ದಾಟಿದೆ. ಇದೇ ವಯಸ್ಸಿನ ಕಿಯಾಂಶ್ ಗೌಡ (1450) 166 ಪಂದ್ಯಗಳನ್ನು ಆಡಿದ್ದಾರೆ. ಆರೋಹ್ ವಿಶಾಲ್ ಭಂಡಾರಿ (1436) 184 ಪಂದ್ಯಗಳ ಅನುಭವ ಹೊಂದಿದ್ದಾರೆ. 10 ವರ್ಷ ಪ್ರಾಯದ ಆಯು ಅತೀಂದ್ರೀಯ ಶೆಟ್ಟಿ (1841) 435 ಪಂದ್ಯಗಳನ್ನು ಆಡಿ 204ರಲ್ಲಿ ಜಯ ಗಳಿಸಿದ್ದಾರೆ. 621 ಪಂದ್ಯಗಳನ್ನು ಆಡಿರುವ ಇಶಾನ್ ಭನ್ಸಾಲಿ (1876) 340 ಜಯ ಕಂಡಿದ್ದಾರೆ.

### ಬಿಳಿ ಕಾಯಿ ಅದೃಷ್ಟ

ಬಾಲ ಚೆಸ್‌ಪಟುಗಳ ಪೈಕಿ ಬಹುತೇಕರು ಬಿಳಿ ಕಾಯಿಗಳಲ್ಲೇ ಹೆಚ್ಚು ಜಯ ಗಳಿಸಿದ್ದಾರೆ. ಅಲ್ಲೊಬ್ಬರು ಇಲ್ಲೊಬ್ಬರು ಕಪ್ಪು ಕಾಯಿಗಳಲ್ಲಿ ಬೆಳಗಿದವರೂ ಇದ್ದಾರೆ. ಕಾಯಿಗಳಿಗೂ ಗೆಲುವು–ಸೋಲಿಗೂ ಸಂಬಂಧವಿಲ್ಲ. ಅದು ತೀರಾ ಸಹಜ ಎಂಬುದು ಬಲ್ಲವರ ಅಭಿಪ್ರಾಯ.

'ಯಾವ ಕಾಯಿಗಳಲ್ಲಿ ಆಡಿದಾಗ ಜಯ ಮತ್ತು ಸೋಲಿನ ಸಂಖ್ಯೆ ಎಷ್ಟು ಎಂಬುದರ ಕಡೆಗೆ ಹೆಚ್ಚು ಗಮನ ಕೊಡಲಿಲ್ಲ. ನನ್ನಷ್ಟಕ್ಕೆ ಆಡುತ್ತೇನೆ' ಎಂದು ಕಪ್ಪು ಕಾಯಿಗಳಲ್ಲಿ ಹೆಚ್ಚು ಪಂದ್ಯಗಳನ್ನು ಗೆದ್ದಿರುವ ಕೇರಳದ ಚಿನ್ಮಯ ಕೃಷ್ಣ ಹೇಳುತ್ತಾರೆ.